# ‘ಅವ್ವ ಪ್ರಶಸ್ತಿ’ಗೆ 12 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಅವ್ವ ಸೇವಾ ಟ್ರಸ್ಟ್‌ನ ಪ್ರಸ್ತುತ ವರ್ಷದ ‘ಅವ್ವ ಪ್ರಶಸ್ತಿ’ಗೆ ಕಾಂಗ್ರೆಸ್ ಮುಖಂಡ ಎಸ್. ಆರ್.ಪಾಟೀಲ, ಪತ್ರಕರ್ತ ಚಂದ್ರಕಾಂತ ವಡ್ಡು, ಸೀತಾರ ವಾದಕ ಛೋಟೆ ರಹಮತ್‌ಖಾನ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಮಂದಿಯನ್ನು ಆಯ್ಕೆ ಮಾಡಲಾಗಿದೆ.

‘ಹುಬ್ಬಳ್ಳಿಯ ಗುಜರಾತ ಭವನದಲ್ಲಿ ಡಿಸೆಂಬರ್ 15ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ 14ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಾಧಕರಿಗೆ ‘ಅವ್ವ ಪ್ರಶಸ್ತಿ’ ಪ್ರದಾನ ಮಾಡಲಾಗುವುದು’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವ್ವ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ ಹೊರಟ್ಟಿ ತಿಳಿಸಿದರು.

‘ಸಾಹಿತಿ ಸಂಗಮನಾಥ ಲೋಕಾಪುರ, ಗಾಯಕಿ ರೇಖಾ ಹೆಗಡೆ, ಭಾಗವತ ಕೇಶವ ಹೆಗಡೆ ಕೊಳಗಿ, ಉದ್ಯಮಿ ಮಹೇಂದ್ರ ಸಿಂಘಿ, ಬಸವ ತತ್ವ ಪ್ರಚಾರಕ ಎಸ್. ಮಹದೇವಯ್ಯ, ಸಮಾಜ ಸೇವಕಿ ರಾಜೇಶ್ವರಿ ಪಾಟೀಲ, ಜಾನಪದ ಕಲಾವಿದ ಬಸವರಾಜ ಶಿಗ್ಗಾವಿ, ಸ್ಕೇಟ್ ಕ್ರೀಡಾಪಟು ತ್ರಿಶಾ ಜಡಲಾ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕಗಳಿಸಿದ ಬಾಗಲಕೋಟೆಯ ಅಂಕಿತಾ ಕೊಣ್ಣೂರ ಅವರು ಅವ್ವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸ್ಮರಣಿಕೆ ಜೊತೆಗೆ ₹25 ಸಾವಿರ ನಗದು ಇರಲಿದೆ’ ಎಂದು ಮಾಹಿತಿ ನೀಡಿದರು.


ಉತ್ತರ ಕರ್ನಾಟಕದ ಪ್ರಚಲಿತ ಸಮಸ್ಯೆಗಳ ಕುರಿತು ಬೆಳಗಾವಿ ಅಧಿವೇಶನದ ವಿಧಾನ ಪರಿಷತ್‌ನಲ್ಲಿ 4 ದಿನಗಳ ಕಾಲ ಚರ್ಚೆಗೆ ಅವಕಾಶ ನೀಡಲಾಗಿದೆ. ಮಹದಾಯಿ, ಕಬ್ಬು ಬೆಳೆಗಾರರ ಸಮಸ್ಯೆ, ಕೃಷ್ಣಾ ಮೇಲ್ದಂಡೆ ಯೋಜನೆ, ತುಂಗಾ, ಭದ್ರಾ, ಕಾರಂಜ ಯೋಜನೆಗಳ ಬಗ್ಗೆ ಚರ್ಚೆ ನಡೆಸಬಹುದಾಗಿದೆ.

**| ಬಸವರಾಜ ಹೊರಟ್ಟಿ** ಸಭಾಪತಿ

# ಉ.ಕ. ಸಮಸ್ಯೆ ಚರ್ಚೆಗೆ 4 ದಿನ ಮೀಸಲು: ಸಭಾಪತಿ ಹೊರಟ್ಟಿ

**ವಿಕ ಸುದ್ದಿಲೋಕ** ಹುಬ್ಬಳ್ಳಿ

ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚಿಸಲು ಒಟ್ಟು ನಾಲ್ಕು ದಿನ ಮೀಸಲಿಡಲಾಗಿದೆ. ಅದನ್ನು ಎಲ್ಲರೂ ಸದುಪಯೋಗಪಡಿಸಿಕೊಂಡು ಸಚಿವ, ಶಾಸಕರು ಆರೋಗ್ಯಕರ ಚರ್ಚೆಗೆ ಸಹಕಾರ ನೀಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಡಿ.10, 11 ಹಾಗೂ 17, 18ರಂದು ಕೃಷ್ಣಾ ಮೇಲ್ದಂಡೆ(ಯುಕೆಪಿ), ತುಂಗಭದ್ರಾ, ಕಾರಂಜಾ, ಮಹದಾಯಿ ಮತ್ತು ಕಳಸಾ-ಬಂಡೂರಿ, ಕೃಷಿ, ಅರಣ್ಯಭೂಮಿ ಅತಿಕ್ರಮಣದಾರರು ಮತ್ತು ಸಂತ್ರಸ್ತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿದೆ. ಜತೆಗೆ ಸಕ್ಕರೆ ಕಾರ್ಖಾನೆ, ತೋಟಗಾರಿಕೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಚರ್ಚಿಸುವಂತೆ ಸಚಿವರು, ಶಾಸಕರಿಗೆ ಸೂಚನೆ ನೀಡಲಾಗಿದೆ,'' ಎಂದರು.

''ಹಿಂದಿನಕ್ಕಿಂತ ಹೆಚ್ಚು ಕ್ರಿಯಾತ್ಮಕ ಅಧಿವೇಶನ ಇದಾಗಲಿದೆ. ಅನಗತ್ಯ ಚರ್ಚೆಗೆ ಅವಕಾಶ ಇಲ್ಲ. ಯಾವ ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂಬುದರ ಬಗ್ಗೆ ಈಗಾಗಲೇ ವಿಷಯಪಟ್ಟಿ ಸಿದ್ಧಪಡಿಸಲಾಗಿದೆ,'' ಎಂದರು.


# ಉತ್ತರ ಕರ್ನಾಟಕ ಅಭಿವೃದ್ಧಿ ಯೋಜನೆ ಪರಿಷತ್‌ನಲ್ಲಿ ಚರ್ಚೆಗೆ 4 ದಿನ ನಿಗದಿ

ಹುಬ್ಬಳ್ಳಿ : ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟ ಮಹತ್ವದ ಅಭಿವೃದ್ಧಿ ಯೋಜನೆ, ವಿಷಯಗಳ ಕುರಿತು 4 ದಿನ ಪೂರ್ಣ ಚರ್ಚೆಗೆ ಪರಿಷತ್ತಿನಲ್ಲಿ ಅವಕಾಶ ನೀಡಲಾಗುತ್ತಿದೆ. ಮಂಗಳವಾರ ಮತ್ತು ಬುಧವಾರ ಚರ್ಚೆಗೆ ಅವಕಾಶ ನೀಡಿ ಗುರುವಾರ ಉತ್ತರ ಕೊಡಿಸಲು ಅವಕಾಶ ಮಾಡಿಕೊಡುವ ತೀರ್ಮಾನ ಮಾಡಲಾಗಿದೆ. ಹಿಂದಿನ ಅಧಿವೇಶನಗಳಿಗಿಂತ ಈ ಬಾರಿಯ ಅಧಿವೇಶನ ವಿಭಿನ್ನ ಮತ್ತು ಅರ್ಥಪೂರ್ಣವಾಗಿ ನಡೆಯಲಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿವೇಶನದ ಮೊದಲು ಬರುವ ಮಂಗಳವಾರ ಮತ್ತು ಬುಧವಾರ ಮಹದಾಯಿ ಮತ್ತು ಕೃಷ್ಣ ಮೇಲ್ದಂಡೆ (ಅಪ್ಪರ್ ಕೃಷ್ಣ) ಯೋಜನೆಗಳ ಬಗ್ಗೆ ಸೇರಿದಂತೆ ಹಲವು ವಿಷಯ ಚರ್ಚೆಗೆ ಅವಕಾಶ ಕೊಡಲಾಗಿದೆ. ನಂತರದ ಮಂಗಳವಾರ, ಬುಧವಾರ ಕಬ್ಬು, ರೈತರ ಸಮಸ್ಯೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆಗೆ ಅವಕಾಶ ನೀಡುತ್ತಿದ್ದೇನೆ. ಪ್ರಶ್ನೋತ್ತರ ಅವಧಿ ಮುಗಿದ ನಂತರ ಅಂದರೆ ಮಧ್ಯಾಹ್ನ 3 ಗಂಟೆಯ ನಂತರ ಎರಡು ದಿನ ಚರ್ಚೆ ಮಾಡಲು ಅವಕಾಶ ನಿಗದಿಪಡಿಸಲಾಗಿದ್ದು, ಅಜೆಂಡಾಕ್ಕೆ ಸಹಿ ಹಾಕಿದ್ದೇನೆ ಎಂದು ತಿಳಿಸಿದರು.

ಅಚ್ಚುಕಟ್ಟಾಗಿ ಸದನ ನಡೆಸಲು 43 ಜನ ಪರಿಷತ್ ಸದಸ್ಯರೊಂದಿಗೆ ಮಾತನಾಡಿದ್ದೇನೆ. ಎಲ್ಲರೂ ಒಪ್ಪಿದ್ದಾರೆ. ಶೇ 80 ರಷ್ಟು ಸದಸ್ಯರು ಅಧಿವೇಶನದಲ್ಲಿ ಹಾಜರಿರುವ ರೀತಿ ನೋಡಿಕೊಳ್ಳಲಾಗುತ್ತದೆ. ಕೆಲವು ಸದಸ್ಯರು ಪ್ರಶ್ನೋತ್ತರ ಮುಗಿದ ಬಳಿಕ ಎದ್ದು ಹೋಗುತ್ತಾರೆ. ಈ ಅಧಿವೇಶನದಲ್ಲಿ ಹಿಂದಿನಂತೆ ಎದ್ದು ಹೋಗದಂತೆ ಮನವರಿಕೆ ಮಾಡಿಕೊಡಲಾಗುವುದು. ಡಿ.9 ರಂದು ಬೆಳಿಗ್ಗೆಯೂ ಸಭೆಯನ್ನು ಕರೆದಿದ್ದೇನೆ ಎಂದು ಹೇಳಿದರು.


ವಿಶೇಷವಾಗಿ ಈ ಅಧಿವೇಶನದ 10 ದಿನಗಳಲ್ಲಿ ಒಂದು ದಿನವನ್ನು 'ಮಕ್ಕಳ ಹಕ್ಕು ರಕ್ಷಣೆ' ಗೆ ಸಂಬಂಧಿಸಿದ ವಿಷಯಗಳ ಕುರಿತ ಚರ್ಚೆಗೆ ನಿಗದಿಪಡಿಸಲಾಗುತ್ತಿದೆ. ಯಾವ ದಿನ ಎಂಬುದನ್ನು ತೀರ್ಮಾನಿಸಿಲ್ಲ ಎಂದು ಸಭಾಪತಿ ಹೇಳಿದರು.



# ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ ಪುಣ್ಯಸ್ಮರಣೆ

# 12 ಸಾಧಕರಿಗೆ ಅವ್ವ ಪ್ರಶಸ್ತಿ

ಹುಬ್ಬಳ್ಳಿ : ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ 14ನೇ ಪುಣ್ಯಸ್ಮರಣೆ ನಿಮಿತ್ತ ಅವ್ವ ಸೇವಾ ಟ್ರಸ್ಟ್ ವತಿಯಿಂದ 'ಅವ್ವ ಪ್ರಶಸ್ತಿ– 2024' ಪ್ರದಾನ ಸಮಾರಂಭ ಡಿ.15 ರಂದು ಹಮ್ಮಿಕೊಳ್ಳಲಾಗಿದೆ. ಈ ಬಾರಿ ಅವ್ವ ಪ್ರಶಸ್ತಿಗೆ 12 ಸಾಧಕರನ್ನು ಆಯ್ಕೆ ಮಾಡಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಬಸವರಾಜ ಎಸ್ ಹೊರಟ್ಟಿ ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 8 ಪುರುಷರು ಹಾಗೂ 4 ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಡಿ.15 ರಂದು ಬೆಳಿಗ್ಗೆ 10.30 ಕ್ಕೆ ಗುಜರಾತ್ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಉಪನ್ಯಾಸಕರು ಹಾಗೂ ಹವ್ಯಾಸಿ ಅಂಕಣಕಾರರಾದ ಅಕ್ಷಯಾ ಗೋಖಲೆ ಮುಖ್ಯ ಅತಿಥಿಯಾಗಿ ಅಗಮಿಸಲಿದ್ದಾರೆ. ಇಳಕಲ್ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠದ ಶ್ರೀ ಗುರು ಮಹಾಂತ ಸ್ವಾಮೀಜಿ ಸಾನ್ನಿಧ್ಯವಹಿಸುವರು ಎಂದು ಹೇಳಿದರು.

ಅವ್ವ ಸೇವಾ ಟ್ರಸ್ಟ್ ಕಾರ್ಯದರ್ಶಿ ಶಶಿ ಸಾಲಿ, ಸಹ ಕಾರ್ಯದರ್ಶಿ ಶ್ರೀಪಾದ ರಾಣೆ ಪತ್ರಿಕಾಗೋಷ್ಠಿಯಲ್ಲಿದ್ದರು.

## 25 ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರ

ಅವ್ವ ಪ್ರಶಸ್ತಿಗೆ ಆಯ್ಕೆಯಾದ 12 ಸಾಧಕರಿಗೂ ತಲಾ 25 ಸಾವಿರ ನಗದು ಪುರಸ್ಕಾರ, ಸ್ಮರಣಿಕೆ ಹಾಗೂ ಸಾಧಕರ ಸಾಧನೆಯ ಹೆಜ್ಜೆ ಗುರುತುಗಳ ಕಿರು ಮಾಹಿತಿಯುಳ್ಳ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ ಎಂದು ಬಸವರಾಜ ಹೊರಟ್ಟಿ ತಿಳಿಸಿದರು.




## ಪ್ರಶಸ್ತಿ ಪುರಸ್ಕೃತರಿವರು...

ಕೃಷಿ ತಜ್ಞ, ಶಿಕ್ಷಣ ತಜ್ಞ, ಅಪರೂಪದ ರಾಜಕೀಯ ಮುತ್ಸದ್ದಿ ಎಸ್.ಆರ್ ಪಾಟೀಲ (ಶಿವನಗೌಡ ರು ಪಾಟೀಲ), ಸಮಾಜಮುಖಿ ಚಿಂತನೆಯ, ಪ್ರಗತಿಶೀಲ ಮನಸ್ಸಿನ ಪತ್ರಕರ್ತ ಚಂದ್ರಕಾಂತ ವಡ್ಡು, ಸಾಹಿತಿ, ಕಥೆಗಾರ, ಅಧ್ಯಾಪಕ, ಸಂಶೋಧಕ ಮತ್ತು ವಾಗ್ಮಿಗಳಾದ ಡಾ.ಸಂಗಮನಾಥ ಲೋಕಾಪುರ, ಸಿತಾರ ವಾದನ ಮಾಂತ್ರಿಕ ಛೋಟೆ ರಹಮತ್ ಖಾನ್, ದಾಸವಾಣಿ, ಸಂತವಾಣಿ, ಅಭಂಗಗಳ ವಿಶಿಷ್ಟ ಗಾಯಕಿ ರೇಖಾ ಹೆಗಡೆ, ಕರಾವಳಿ ತೀರದ ಜಾನಪದ ಕಲಾ ತಜ್ಞ, ಯಕ್ಷಗಾನ ಕಲಾವಿದ ಕೇಶವ ಹೆಗಡೆ ಕೊಳಗಿ, ಉದ್ಯಮಿ, ಶಿಕ್ಷಣ ಪ್ರೇಮಿ, ಧಾರ್ಮಿಕ ಮಾನವತಾವಾದಿ ಮಹೇಂದ್ರಕುಮಾರ ಸಿಂಘಿ, ಬಸವಣ್ಣನವರ ತತ್ವಾದರ್ಶಗಳನ್ನು ವಿಶ್ವದರ್ಶನ ಮಾಡಿದ ಎಸ್ ಮಹದೇವಯ್ಯ, ಕಾನೂನು ಪದವೀಧರರು, ಸಮಾಜ ಸೇವಕಿ, ರಾಜಕೀಯ ಧುರೀಣೆ ರಾಜೇಶ್ವರಿ ವಿ. ಪಾಟೀಲ, ಹಳ್ಳಿ ಸೊಗಡಿನ ಜಾನಪದ ಕಲಾವಿದ ಬಸವರಾಜ ಶಿಗ್ಗಾವಿ, ಅಂತರರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪಡೆದ ವಿಶ್ವ ಸ್ಕೇಟ್ ಕ್ರೀಡಾಪಟು ತ್ರಿಶಾ ಪ್ರವೀಣ ಜಡಲಾ, ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿದ್ದ ಹಳ್ಳಿಯ ಬಡ ರೈತ ಕುಟುಂಬದ ಹಿನ್ನೆಲೆಯಿಂದ ಬಂದ ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ವಜ್ರಮಟ್ಟಿ ಗ್ರಾಮದ ಬಡ ರೈತ ಕುಟುಂಬದ ಅಂಕಿತಾ ಬಸಪ್ಪ ಕೊಣ್ಣೂರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಟ್ರಸ್ಟ್ ಅಧ್ಯಕ್ಷ ಬಸವರಾಜ ಹೊರಟ್ಟಿ ಹೇಳಿದರು.

# ಉ.ಕ. ಚರ್ಚೆಗೆ 4 ದಿನ ಮೀಸಲು

**ಹುಬ್ಬಳ್ಳಿ:** ಉತ್ತರ ಕರ್ನಾಟಕ ಭಾಗದ ಹಲವು ಸಮಸ್ಯೆಗಳ ಬಗ್ಗೆ ಚರ್ಚಿಸಲು ಪ್ರಸ್ತುತ ಬೆಳಗಾವಿ ಅಧಿವೇಶನದಲ್ಲಿ ನಾಲ್ಕು ದಿನ ಮೀಸಲಿಡಲಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹದಾಯಿ-ಕಳಸಾ -ಬಂಡೂರಿ, ಕೃಷ್ಣಾ ಮೇಲ್ದಂಡೆ, ತುಂಗ ಭದ್ರಾ, ಸಕ್ಕರೆ ಕಾರ್ಖಾನೆ, ತೋಟಗಾರಿಕೆ ಸೇರಿ ಹಲವು ವಿಷಯಗಳ ಬಗ್ಗೆ ಡಿ.10 ಮತ್ತು 11 ಹಾಗೂ ಡಿ.17 ಮತ್ತು 18ರಂದು ಚರ್ಚೆ ನಡೆಸಲಾಗುವುದು ಎಂದರು. ಈ ಅಧಿವೇಶನ ಉತ್ತಮ ರೀತಿಯಲ್ಲಿ ನಡೆಯಲಿದೆ ಎಂಬ ವಿಶ್ವಾಸವಿದೆ. ವಿರೋಧ ಪಕ್ಷದ ನಾಯಕರ ಜತೆ ಮಾತನಾಡಿದ್ದೇನೆ. ಮಂಗಳವಾರ ಸರ್ವಪಕ್ಷಗಳ ಮುಖಂಡರ ಸಭೆ ಕರೆದಿದ್ದು, ಅಲ್ಲಿಯೂ ತಿಳಿಸುತ್ತೇನೆ ಎಂದರು.

ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ವಿಷಯಪಟ್ಟಿ ಸಿದ್ಧಪಡಿಸಲಾಗಿದೆ. ಶೂನ್ಯವೇಳೆ ನಂತರ ಈ ವಿಷಯಗಳ ಕುರಿತು ಚರ್ಚೆ ನಡೆಯಲಿದ್ದು, ರಾತ್ರಿ 10 ಗಂಟೆಯಾದರೂ ಎಲ್ಲರೂ ಪಾಲ್ಗೊಳ್ಳಬೇಕು ಎಂದು ತಿಳಿಸಿದ್ದೇನೆ ಎಂದರು.

# Showdown on waqf, health crisis to turn up heat at winter session

BV.Shivashankar@timesofindia.com

**Bengaluru**: Though the govt has said that it intends to focus on issues dogging North Karnataka at the winter session of legislature beginning Monday in Belagavi, the session is likely to witness an acrimonious showdown between governing Congress and principal opposition BJP over issues such as the waqf land row and deaths of lactating mothers a govt hospital in Ballari besides others.

Tuesdays and Wednesdays of the two-week session have been exclusively earmarked to debate these issues, a decision that indicates a sense of urgency to prioritise discussions on North Karnataka since the session has already been cut short by a day on account of the Kannada Sahitya Sammelana to be held in Mandya from Dec 20.

Basanagouda Patil Yatnal, BJP MLA representing Bijapur City, has threatened a stir if issues such as the Upper Krishna project are not allowed. The Business Advisory Committee on Monday will decide on time slots for each subject.

"The demand to debate issues pertaining to North Karnataka is just. We plan to provide enough time and have told members to come prepared to discuss development of Kittur Karnataka and Kalyana Karnataka," said Basavaraj Horatti, chairman of the legislative council.

But the fear is that controversial issues like the muddle over waqf properties and a crisis in the healthcare sector, including shortages of drugs and hike in user charges at govt hospitals besides deaths of lactating women, could dominate. Both Congress and BJP have armed themselves with points to prove.

Congress is likely to argue that the previous BJP govt had issued far more waqf notices and the ongoing process is only a continuation of the policy, while BJP is likely to try to make it an issue of religion since some temples too received notices.


Chief minister Siddaramaiah last week held a closed-door meeting to find means to defend his govt. The governing party may raise the Covid-19 procurement scam to counter BJP on the hospital crisis.

"It is good if BJP raises these issues since it would give us an opportunity to expose them," said Ashok Pattan, Congress chief whip in the assembly. Congress Legislature Party will meet on Tuesday to fine tune the party's floor strategy.

BJP appears to be looking forward to the session with renewed vigour, especially with dissidence led by Yatnal and internal squabbling over leadership resolved. The party will move adjournment motions over waqf and health issues. The muddle over BPL cards, the Muda case, misappropriation of ST development corporation funds and alleged corruption in the excise department are among other issues it will look to raise. BJP Legislature Party meeting will be held on Monday where plans will be firmed up.

"We will not forego any opportunity to corner the govt, but it is doubtful if the govt will allow debates on these issues," said Chalavadi Narayanaswamy, leader of the opposition in the council.

TOI



**BRIGHT LIGHTS:** A decked-up Suvarna Vidhana Soudha in Belagavi on Sunday, the eve of the two-week winter session of both Houses of the legislature

## K'TAKA UNIVERSITIES BILL AMONG 8 TO BE TABLED

Ravindra.Uppar @timesofindia.com

**Belagavi:** Assembly speaker UT Khader revealed five govt bills and three private ones, besides two to regularise ordinances will be tabled during the winter session of the legislature beginning Monday at Suvarna Vidhana Soudha (SVS) in Belagavi.

Khader, who inspected preparations for the session and later addressed a press conference, said important bills including Karnataka Universities (Amendment) Bill, Rural Development and Panchayat Raj Universities (Amendment) Bill and Karnataka Labourer Welfare Fund (Amendment) Bill will be taken up for discussion.

The varsities bill seeks to curtail powers of the governor on appointments of vice-chancellors, while the RDPR bill is aimed at replacing the governor with chief minister as its chancellor.

The labour welfare bill targets an increase in contribution of funds by the state, employers and employees towards the welfare fund. The ordinances which the govt hopes to pass into law includes Bruhat Bengaluru Mahanagara Palike (Amendment) to regularise the govt's one-time settlement scheme on property tax, and Karnataka Goods and Services Tax (Amendment).

"I have received 3,004 questions and 205 calling attention motions," said Khader, who inspected his new seat — a rosewood chair, identical to the one at Vidhana Soudha.

Khader said about 2,500 officials and staff of various departments and 6,000 police personnel will be deployed during the session. He said the 10-day session is expected to cost the exchequer Rs 25 crore.

As part of the centenary celebrations of the national Congress session that was held in Belagavi in 1924, a photo exhibition has been organised on the premises of SVS. Some 100 pictures related to the life of Mahatma Gandhi are on display for the benefit of students and teachers who arrive to attend the session. Some of these pictures of Gandhi are rare, Khader said.

The private bills submitted for approval include one by Darshan Puttannaiah on climate change in Karnataka, and another by MY Patil which concerns development of Dattatreya Temple in Ganagapur. HK Suresh's private bill is related to maintenance of the Belur-Halibedu world heritage site.